**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -2722/2024**
**ಚಾಸಾ- 14/** ಪ್ರಾಸಾ-06

| | |
|---|---|
| ಹೆಸರು | **ಪ್ರಸನ್ನ** |
| ತಂದೆಯ ಹೆಸರು | **ಗಂಗಹನುಮಯ್ಯ** |
| ವಯಸ್ಸು | **35** |
| ಉದ್ಯೋಗ | **ಅರವಳಿಕೆ ತಜ್ಞರು** |
| ವಿಳಾಸ | **ನೆಲಮಂಗಲ** |

**ದಿನಾಂಕ:28-08-2025ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ-**

ನಾನು 2020ನೇ ಇಸವಿಯಿಂದ ಇಲ್ಲಿಯವರೆಗೆ ಎಸ್. ಎಸ್. ಜಿ ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞರಾಗಿ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿ.29-03-2024ರಂದು ಸಂಜೆ 4.00 ಗಂಟೆ ಸಮಯದಲ್ಲಿ ಚಾಸಾ-2 ರವರು ರಸ್ತೆ ಅಪಘಾತದ ವಿಷಯಕ್ಕೆ ಸಂಬಂಧಿಸಿದಂತೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುತ್ತಾರೆ. ನಾನು ಚಾಸಾ-2ರವರನ್ನು ಪರಿಶೀಲನೆ ಮಾಡಿರುತ್ತೇನೆ. ಚಾಸಾ-2ರವರ ಮಂಡಿ ಮತ್ತು ಮೊಣಕೈಗೆ ತರಚಿದ ಗಾಯ ಮತ್ತು ಬಲ ಮೊಣಕೈ ಮೇಲೆ ಊತದ ಗಾಯ ಇತ್ತು. ಈ ಮೇಲೆ ಹೇಳಿರುವ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತದೆ. ಈಗ ಸಾಕ್ಷಿಗೆ ನಿಪಿ-24ನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು.

ಪಾಟೀ **ಸವಾಲು-ಆರೋಪಿಯ ಪರ ಶ್ರೀ. ಎನ್. ಕೆ, ವಕೀಲರಿಂದ-**

ದ್ವಿಚಕ್ರವಾಹನದಿಂದ ಆಯಾತಪ್ಪಿ ಬಿದ್ದದ್ದರೂ ಸಹ ಮೇಲೆ ಹೇಳಿರುವ ಗಾಯಗಳು ಸಂಭವಿಸುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಯಾವುದಾದರೂ ವ 8ಗಳು ದೊಡ್ಡ ಲಾರಿಯಿಂದ ಅಪಘಾತವಾದರೆ ತೀವ್ರ ಸ್ವರೂಪದ ಗಾಯಗಳು ಸಂಭವಿಸುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-2ರವರು ಆಯಾ ತಪ್ಪಿ

ಬಿದ್ದ ಕಾರಣ ಈ ಮೇಲೆ ಹೇಳಿರುವ ಗಾಯಗಳು ಸಂಭವಿಸಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ . ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**